# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.9 PW.6**

| | | |
|---|---|---|
| **ಸಾಕ್ಷಿದಾರರ ಹೆಸರು** | : | ನಾಗರಜ್ |
| **ತಂದೆಯ ಹೆಸರು** | : | ರಾಜಣ್ಣ |
| **ವಯಸ್ಸು** | : | 45 ವರ್ಷ |
| **ಉದ್ಯೋಗ** | : | ಆಟೋ ಚಾಲಕ |
| **ವಾಸಸ್ಥಳ** | : | ಶೇಷಾದ್ರಿಪುರಂ, ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 04.01.2024 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ಸುಮಾರು ಒಂದುವರೆ ವರ್ಷಗಳ ಹಿಂದೆ ರಾತ್ರಿ 9-30 ರಿಂದ 10-00 ಗಂಟೆಯ ಸಮಯದಲ್ಲಿ ನಾನು Majestic ನಿಂದ ನನ್ನ ಮನೆಗೆ ಹೋಗಲು ಶೇಷಾದ್ರಿಪುಂ ಕಡೆಗೆ ನನ್ನ ಆಟೋ ದಿಂದ ಹೋಗುತ್ತಿರುವಾಗ ಸ್ಲಂಮ್ ಬೋರ್ಡ್ ಜಂಕ್ಷನ್ ಸಿಗ್ನಲ್ ಇದ್ದರಿಂದ ನಾನು ನನ್ನ ಆಟೋವನ್ನು ನಿಲ್ಲಿಸಿಕೊಂಡು ನಿಂತಿದ್ದೆನು. ಆ ಸಮಯದಲ್ಲಿ ಅಲ್ಲಿ ಹೊಯ್ಸಳ ವಾಹನ ನಿಂತಿದ್ದು ಹೊಯ್ಸಳ ವಾಹನದಲ್ಲಿ ಇದ್ದ ಪೊಲೀಸಿನವರಿಗೂ ಹಾಗೂ ಮೊಟಾರ್ ಸೈಕಲ್ ನಲ್ಲಿ ಇದ್ದ ಒಬ್ಬ ವ್ಯಕ್ತಿಯ ನಡುವೆ ಜಗಳವಾಗುತ್ತಿತ್ತು. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಮೊಟಾರ್ ಸೈಕಲ್ ನಲ್ಲಿ ಇದ್ದ ವ್ಯಕ್ತಿ ಹೊಯ್ಸಳ ವಾಹನದ ಪೊಲೀಸರಿಗೆ ಬೈಯುತ್ತಿದ್ದನು. ಇದ್ದಕ್ಕಿದ್ದ ಹಾಗೆ ಆತನು ಹೊಯ್ಸಳ ವಾಹನದ ಪೊಲೀಸಿನವರ ಮೇಲೆ ತನ್ನ ಮೊಟಾರ್ ಸೈಕಲ್ ಅನ್ನು ಚಲಾಯಿಸಿದ್ದರಿಂದ ಅವರ ಬಲ ಕಾಲಿಗೆ ಪೆಟ್ಟಾಯಿತು. ನಂತರ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಹೋದರು. ಸದರಿ ವ್ಯಕ್ತಿಯ ಹೆಸರು ನನಗೆ ಗೊತ್ತಾಗಿರುವುದಿಲ್ಲ ಆರೋಪಿಯನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಸದರಿ ವಿಚಾರವಾಗಿ ಠಾಣೆಯಲ್ಲಿ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತನು ಮತ್ತು ಆರೋಪಿಯ ಪರ ವಕೀಲರು ಗೈರು ಹಾಜರು ಇರುತ್ತಾರೆ.

**ಪಾಟೀ ಸವಾಲಿಗಾಗಿ:** ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆರೋಪಿ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**